ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ ದಿನಾಂಕ : DATE : 15/11/19

## 14 ಮಂದಿಗೆ ಬಿಜೆಪಿ ಟಿಕೆಟ್ ಘೋಷಣೆ

# ಅಂತೂ ಕಮಲ ತೆಕ್ಕೆಗೆ 16 ಅನರ್ಹ ಶಾಸಕರು

**ಆರೆಸ್ಸೆಸ್, ಹೈಕಮಾಂಡ್ ವಿರೋಧ ಹಿನ್ನೆಲೆ: ರೋಷನ್ ಬೇಗ್ ಸೇರ್ಪಡೆ ಇಲ್ಲ**

**ಸ್ಪರ್ಧೆಗೆ ಹಿಂದೇಟು ಹಾಕಿದ ಶಂಕರ್ ಹೊರತುಪಡಿಸಿ ಉಳಿದೆಲ್ಲರಿಗೂ ಟಿಕೆಟ್**

**ಎಲ್ಲರನ್ನೂ ಗೆಲ್ಲಿಸಲು ಪಣ ತೊಡುತ್ತೇವೆ, ನಂಬಿಕೆದ್ರೋಹ ಮಾಡಲ್ಲ: ಬಿಎಸ್‌ವೈ**

15/11/19

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಿರೀಕ್ಷೆಯಂತೆ ಅನರ್ಹ ಶಾಸಕರ ಪೈಕಿ 16 ಮಂದಿ ಬಿಜೆಪಿ ಸೇರ್ಪಡೆಯಾಗಿದ್ದು, ಗುರುವಾರ ಪಕ್ಷದ ಕಚೇರಿಯಲ್ಲಿ ಬಾವುಟ ಹಿಡಿದು ಸದಸ್ಯತ್ವ ಸ್ವೀಕರಿಸಿದ್ದಾರೆ.

ಅದರ ಬೆನ್ನಲ್ಲೇ ಚುನಾವಣೆ ನಡೆಯುವ ಹದಿನೈದು ವಿಧಾನಸಭಾ ಕ್ಷೇತ್ರಗಳ ಪೈಕಿ ಹದಿನಾಲ್ಕು ಕ್ಷೇತ್ರಗಳಿಗೆ ಹಿಂದೆ ಪ್ರತಿನಿಧಿಸುತ್ತಿದ್ದ ಆಯಾ ಅನರ್ಹ ಶಾಸಕರನ್ನೇ ಪಕ್ಷದ ಅಧಿಕೃತ ಅಭ್ಯರ್ಥಿಗಳನ್ನಾಗಿ ಬಿಜೆಪಿ ಹೈಕಮಾಂಡ್ ಘೋಷಿಸಿದೆ.

ಹಾವೇರಿ ಜಿಲ್ಲೆ ರಾಣೆಬೆನ್ನೂರು ಕ್ಷೇತ್ರದ ಅನರ್ಹ ಶಾಸಕ ಆರ್.ಶಂಕರ್ ಮಾತ್ರ ಚುನಾವಣೆಗೆ ಸ್ಪರ್ಧಿಸಲು ಹಿಂದೇಟು ಹಾಕಿರುವುದರಿಂದ ಆ ಕ್ಷೇತ್ರಕ್ಕೆ ಅಭ್ಯರ್ಥಿಯನ್ನು ಘೋಷಿಸಿಲ್ಲ. ಇನ್ನೆರಡು ದಿನಗಳಲ್ಲಿ ಬೇರೊಬ್ಬ ಪಕ್ಷದ ಮುಖಂಡರನ್ನು ಅಭ್ಯರ್ಥಿಯನ್ನಾಗಿ ಪ್ರಕಟಿಸುವ ನಿರೀಕ್ಷೆಯಿದೆ. ಶಂಕರ್ ಅವರನ್ನು ವಿಧಾನ ಪರಿಷತ್ತಿಗೆ ಆಯ್ಕೆ ಮಾಡಿ ಸಚಿವರನ್ನಾಗಿ ಮಾಡುವುದಾಗಿ ಖುದ್ದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ಇದೇ ವೇಳೆ ಎಲ್ಲ ಶಾಸಕರೂ ಗೆದ್ದು ಬಂದ ಮೇಲೆ ಸಚಿವರನ್ನಾಗಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಅವರು ಬಹಿರಂಗವಾಗಿ ಪ್ರಕಟಿಸುವ ಮೂಲಕ ಎಲ್ಲ ಅನುಮಾನಗಳಿಗೂ ತೆರೆ ಎಳೆದಿದ್ದಾರೆ.

► 13



ಬೆಂಗಳೂರಿನ ರಾಜ್ಯ ಬಿಜೆಪಿ ಕಚೇರಿ ಬಳಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ 16 ಅನರ್ಹ ಶಾಸಕರು ಕೇಸರಿ ಪಾಳಯ ಸೇರಿದರು.

- ಗೆದ್ದು ಬಂದ ಬಳಿಕ ಮಂತ್ರಿ ಪಟ್ಟ: ಬಿಎಸ್‌ವೈ
- ಶಂಕರ್‌ರನ್ನು ಎಂಎಲ್‌ಸಿ ಮಾಡಿ ಮಂತ್ರಿಗಿರಿ
- ಕುಮಟಳ್ಳಿಗೆ ಟಿಕೆಟ್: ಡಿಸಿಎಂ ಸವದಿ ಅತೃಪ್ತಿ
- ರಾಣೆಬೆನ್ನೂರು ಅಭ್ಯರ್ಥಿ ಆಯ್ಕೆಗೆ ಸಮಿತಿ
- ಬಿಜೆಪಿಗೆ ಶರತ್ ಸಡ್ಡು: ಎಂಟಿಬಿಗೆ ಚಿಂತೆ
- ರೋಷನ್ ಬೇಗ್ ಪಕ್ಷೇತರ ಅಭ್ಯರ್ಥಿ?

9

(14)

# ಅಂತೂ ಕಮಲ ತೆಕ್ಕೆಗೆ 16 ಅನರ್ಹ ಶಾಸಕರು

15/11/19

ಮೊದಲ ಪುಟದಿಂದ

ಗುರುವಾರ ಪಕ್ಷದ ಕಚೇರಿ ಮುಂಭಾಗದಲ್ಲಿ ಸಿದ್ಧಪಡಿಸಿದ್ದ ಬೃಹತ್ ವೇದಿಕೆಯಲ್ಲಿ ಶಿವಾಜಿನಗರದ ರೋಷನ್ ಬೇಗ್ ಅವರೊಬ್ಬರನ್ನು ಹೊರತುಪಡಿಸಿ, ಇನ್ನುಳಿದ ಎಲ್ಲ ಹದಿನಾರು ಮಂದಿ ಅನರ್ಹ ಶಾಸಕರು ಮುಖ್ಯಮಂತ್ರಿ ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಬಿಜೆಪಿ ಉಸ್ತುವಾರಿ ಮುರಳೀಧರರಾವ್ ಮತ್ತಿತರ ನಾಯಕರ ಸಮ್ಮುಖದಲ್ಲಿ ತಮ್ಮ ಬೆಂಬಲಿಗರೊಂದಿಗೆ ಬಿಜೆಪಿಗೆ ಪಾದಾರ್ಪಣೆ ಮಾಡಿದರು. ಅನರ್ಹ ಶಾಸಕರ ಸೇರ್ಪಡೆಗೆ ಬುಧವಾರವೇ ಎಲ್ಲ ಸಿದ್ಧತೆ ಮುಗಿದಿತ್ತು. ಸುಪ್ರೀಂಕೋರ್ಟ್ ತೀರ್ಪು ಹೊರಬಿದ್ದ ಬೆನ್ನಲ್ಲೇ ಪಕ್ಷದ ಹಿರಿಯ ನಾಯಕರನ್ನು ಒಳಗೊಂಡ ಕೋರ್ ಕಮಿಟಿ ಸಭೆ ಸೇರಿ ಸೇರ್ಪಡೆಗೆ ತಾಂತ್ರಿಕವಾಗಿ ಹಸಿರು ನಿಶಾನೆ ನೀಡಲಾಗಿತ್ತು. ಅಲ್ಲದೆ, ದೆಹಲಿಯಲ್ಲೇ ಅನರ್ಹ ಶಾಸಕರು ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರನ್ನು ಭೇಟಿ ಮಾಡಿ ಸಮಾಲೋಚನೆಯನ್ನೂ ನಡೆಸಿದ್ದರು. ಅಲ್ಲಿಂದ ವಾಪಸಾದ ಬಳಿಕ ಎಲ್ಲ ಅನರ್ಹರೂ ಮುಖ್ಯಮಂತ್ರಿ ಯಡಿಯೂರಪ್ಪ ಅವರ ನಿವಾಸಕ್ಕೆ ತೆರಳಿ ಚರ್ಚಿಸಿದ್ದರು.

ಬಹುಕೋಟಿ ಐಎಂಎ ಹಗರಣದ ಆರೋಪದ ಹಿನ್ನೆಲೆಯಲ್ಲಿ ಸಂಘ ಪರಿವಾರ ಮತ್ತು ಬಿಜೆಪಿ ವರಿಷ್ಠರ ವಿರೋಧದಿಂದಾಗಿ ಶಿವಾಜಿನಗರದ ಅನರ್ಹ ಶಾಸಕ ರೋಷನ್ ಬೇಗ್ ಅವರೊಬ್ಬರು ಮಾತ್ರ ಪಕ್ಷ ಸೇರ್ಪಡೆಯಾಗಲಿಲ್ಲ. ಅವರು ಪಕ್ಷೇತರ ಸದಸ್ಯರಾಗಿ ಸ್ಪರ್ಧಿಸಲಿದ್ದಾರೆ. ಆ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯನ್ನಾಗಿ ಬಿಬಿಎಂಪಿಯ ಮಾಜಿ ಸದಸ್ಯ ಎಂ.ಶರವಣ ಅವರನ್ನು ಕಣಕ್ಕಿಳಿಸಲಾಗಿದೆ.

ಅನರ್ಹ ಶಾಸಕರನ್ನು ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿದ ಯಡಿಯೂರಪ್ಪ, ಎಲ್ಲ ಸ್ಥಾನಮಾನಗಳನ್ನು ತ್ಯಾಗ ಮಾಡಿದ್ದಲ್ಲದೆ ತಮ್ಮ ರಾಜಕೀಯ ಭವಿಷ್ಯವನ್ನು ಒತ್ತೆಯಿಟ್ಟು ಬಿಜೆಪಿಗೆ ಬಂದಿರುವವರನ್ನು ಗೆಲ್ಲಿಸಿಕೊಂಡು ಬರುವುದು ನಮ್ಮ ಜವಾಬ್ದಾರಿ. ಅದಕ್ಕಾಗಿ ನಾವೆಲ್ಲ ಪಣ ತೊಡುತ್ತೇವೆ. ನಿಮಗೆ ನಂಬಿಕೆ ದ್ರೋಹ ಮಾಡುವುದಿಲ್ಲ. ನಾವು ನಿಮಗೆ ನೀಡಿದ ಭರವಸೆಯನ್ನು ಈಡೇರಿಸುತ್ತೇವೆ. ನಾವೆಲ್ಲರೂ ನಿಮ್ಮ ಜೊತೆಗಿದ್ದೇವೆ. ಪಕ್ಷದ ಹೈಕಮಾಂಡ್ ನಿಮ್ಮ ಜೊತೆಗಿದೆ ಎಂದು ಅಭಯ ನೀಡಿದರು.

ಅದೇ ರೀತಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮಾತನಾಡಿ, ಇಡೀ ಪಕ್ಷ ನಿಮ್ಮ ಜೊತೆಗಿದೆ. ನಿಮ್ಮ ಕ್ಷೇತ್ರಗಳಲ್ಲಿ ನಮ್ಮ ಕಾರ್ಯಕರ್ತರು ಪ್ರಚಾರಕ್ಕೆ ಧುಮುಕಿ ಗೆಲುವಿಗೆ ಶ್ರಮಿಸಲಿದ್ದಾರೆ ಎಂದು ಭರವಸೆ ಕೊಟ್ಟರು.

## 14 ಅನರ್ಹರಿಗೆ ಬಿಜೆಪಿ ಟಿಕೆಟ್

| | |
|---|---|
| ಅಥಣಿ | ಮಹೇಶ್ ಕುಮಟಳ್ಳಿ |
| ಕಾಗವಾಡ | ಶ್ರೀಮಂತಗೌಡ ಪಾಟೀಲ |
| ಗೋಕಾಕ್ | ರಮೇಶ್ ಜಾರಕಿಹೊಳಿ |
| ಯಲ್ಲಾಪುರ | ಶಿವರಾಂ ಹೆಬ್ಬಾರ |
| ಹಿರೇಕೆರೂರು | ಬಿ.ಸಿ.ಪಾಟೀಲ್ |
| ವಿಜಯನಗರ | ಆನಂದ್ ಸಿಂಗ್ |
| ಚಿಕ್ಕಬಳ್ಳಾಪುರ | ಡಾ.ಕೆ.ಸುಧಾಕರ್ |
| ಕೆ.ಆರ್.ಪುರ | ಬೈರತಿ ಬಸವರಾಜ |
| ಯಶವಂತಪುರ | ಎಸ್.ಟಿ.ಸೋಮಶೇಖರ್ |
| ಮಹಾಲಕ್ಷ್ಮೀ ಲೇಔಟ್ | ಕೆ.ಗೋಪಾಲಯ್ಯ |
| ಹೊಸಕೋಟೆ | ಎಂ.ಟಿ.ಬಿ.ನಾಗರಾಜ್ |
| ಕೆ.ಆರ್.ಪೇಟೆ | ಕೆ.ಸಿ.ನಾರಾಯಣಗೌಡ |
| ಹುಣಸೂರು | ಎಚ್.ವಿಶ್ವನಾಥ್ |
| ಶಿವಾಜಿನಗರ | ಎಂ.ಶರವಣ |